ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/203/ಜಿಪಸ/2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 28-11-2014.

## ಸುತ್ತೋಲೆ

ವಿಷಯ: ಜಿಲ್ಲಾ ಪಂಚಾಯಿತಿ ಸದಸ್ಯರ ಹೊರ ರಾಜ್ಯ ಶೈಕ್ಷಣಿಕ ಪ್ರವಾಸಕ್ಕೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ: 20.05.2014 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) ರವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತಾಧಿಕಾರ ಸಮಿತಿ ಸಭೆಯ ನಡವಳಿಗಳು.

ಸರಕಾರದಲ್ಲಿ ಆಗಿಂದಾಗ್ಗೆ ಅಧ್ಯಯನ ಪ್ರವಾಸ ಕೈಗೊಳ್ಳಲು ಅನುವಾಗುವಂತೆ ಕೋರಿಕೆಗಳು ಜಿಲ್ಲಾ ಪಂಚಾಯಿತಿಗಳಿಂದ ಸ್ವೀಕೃತವಾಗುತ್ತಿರುತ್ತವೆ. ಇಂತಹ ಪ್ರಸ್ತಾವನೆಗಳನ್ನು ಸರಕಾರದ ಹಂತದಲ್ಲಿ ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸುವುದರಲ್ಲಿ ಕಾಲಹರಣವಾಗುತ್ತಿರುವುದರಿಂದ ಇಂತಹ ಸಂಗತಿಗಳನ್ನು ಆ ಮೂಲಾಗ್ರವಾಗಿ ಪರಿಶೀಲಿಸಿ, ಇನ್ನು ಮುಂದೆ ಯಾವುದೇ ತರಹದ ಅಧ್ಯಯನ ಪ್ರವಾಸವನ್ನು ಕೈಗೊಳ್ಳುವುದಕ್ಕೆ ನಿರ್ಬಂಧ ಹೇರಬೇಕೆಂಬ ನಿರ್ಣಯಕ್ಕೆ ಬಂದು ಆದಾಗ್ಯೂ ಇಂತಹ ಪ್ರವಾಸವು ಅನಿವಾರ್ಯವೆಂದು ಸರಕಾರವು ಪರಿಗಣಿಸಿದಲ್ಲಿ ಮಾತ್ರ ಕೈಗೊಳ್ಳುವುದು ಸೂಕ್ತವೆಂಬ ನಿರ್ಧಾರಕ್ಕೆ ಬರಲಾಗಿದೆ.

ಆದ ಕಾರಣ ಇನ್ನು ಮುಂದೆ ಇಂತಹ ಅಧ್ಯಯನ ಪ್ರವಾಸ ಕಾರ್ಯಕ್ರಮ ಕೈಗೊಳ್ಳುವುದು ಕೇವಲ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಆಯೋಜಿಸಿದ ತರಬೇತಿಗಳ ಭಾಗವಾಗಿರಬೇಕೆಂದು ಷರತ್ತನ್ನು ವಿಧಿಸಲಾಗಿದೆ. ಹಾಗೆ ಮಾಡಿದಲ್ಲಿ ಅಂತಹ ಅಧ್ಯಯನ ಪ್ರವಾಸದಿಂದ ಸರಕಾರಕ್ಕೆ ಉಪಯುಕ್ತ ಮಾಹಿತಿ ದೊರಕಿದಂತಾಗುತ್ತದೆ ಹಾಗೂ ಜನಪರ ಕಾರ್ಯಕ್ರಮ ಕುರಿತಂತೆ ಅತ್ಯುತ್ತಮ ಸಲಹೆ ಸೂಚನೆಯನ್ನು ಸಹ ಬೇಡಬಹುದಾಗಿರುತ್ತದೆ. ಇದರಿಂದ ಉತ್ತಮ ಫಲಿತಾಂಶ ಹೊರಹೊಮ್ಮುವ ಸಾಧ್ಯತೆ ಇರುತ್ತದೆ. ಪ್ರವಾಸದಲ್ಲಿ ಸಂಗ್ರಹಿಸಿದ ಉಪಯುಕ್ತ ವಿವರಗಳನ್ನು ತರಬೇತಿಯ ಸಮಯದಲ್ಲಿ ಚರ್ಚಿಸಲ್ಪಟ್ಟು ಅದರ ಉಪಯೋಗವನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ. ಜಿಲ್ಲಾ ಪಂಚಾಯಿತಿಯ ಮುಖ್ಯಾ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸಂಗತಿಯನ್ನು ಗಣನೆಗೆ ತೆಗೆದುಕೊಂಡು ಉಪಯುಕ್ತವೆಂದು ಕಂಡುಬಂದಲ್ಲಿ ಮಾತ್ರ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿರುತ್ತದೆ.

ಎಸ್.ಎನ್. ಕಲಾವತಿ
(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಗ್ರಾಮೀಣಾಭಿವೃದ್ಧಿ ಪಂ.ರಾಜ್ ಇಲಾಖೆ

ಇವರಿಗೆ:

1) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2) ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3) ಸಂಪಾದಕರು, ಕರ್ನಾಟಕ ವಿಕಾಸ/ವೆಬ್‌ಸೈಟ್, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4) ಶಾಖಾ ರಕ್ಷಾಕಡತ.

ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2) ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ.

E:\M.Rc\Suttole\203